ಅ) ಮೈಸೂರು ನಗರದಲ್ಲಿರುವ ಕ್ಷಯರೋಗದ ಆಸ್ಪತ್ರೆ ಒಳರೋಗಿಗಳ ಅಭಾವದಿಂದ ಹೆಚ್ಚಿನ ಕೊಠಡಿಗಳು ಖಾಲಿ ಬಿಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?
ಆ) ಈ ಆಸ್ಪತ್ರೆಯಲ್ಲಿ ಒಳರೋಗಿಗಳಿಗೆ ವ್ಯವಸ್ಥೆ ಮಾಡಿರುವ ಹಾಸಿಗೆಗಳ ಸಂಖ್ಯೆ ಎಷ್ಟು?
ಇ) ಪ್ರಸಕ್ತ ಒಳರೋಗಿಗಳಾಗಿರುವ ರೋಗಿಗಳ ಸಂಖ್ಯೆ ಎಷ್ಟು?
ಈ) ಈ ಆಸ್ಪತ್ರೆಯನ್ನು ಸಾರ್ವಜನಿಕ ಆಸ್ಪತ್ರೆಯನ್ನಾಗಿ ಪರಿವರ್ತಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :
ಅ) ಇಲ್ಲ.
ಆ) 470
ಇ) 390
ಈ) ಇಲ್ಲ.

<u>ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ.</u>

<u>ವಿಷಯ : ರಾಜ್ಯದ ಹಳ್ಳಿಗಳಲ್ಲಿ ಕುಡಿಯುವ ನೀರಿನ ಅಭಾವ.</u>

ಶ್ರೀ ಗುರಪಾದಪ್ಪ ನಾಗಮಾರಪಳ್ಳಿ : ಔರಾದ್ ತಾಲ್ಲೂಕಿನಲ್ಲಿ 60 ಹಳ್ಳಿಗಳಲ್ಲಿ ನೀರು ಇಲ್ಲ. ಕೊಳಚೆ ಬಾವಿಗಳು ಒಣಗಿ ಹೋಗಿವೆ. ಎಲ್ಲೆಲ್ಲಿ ಬೋರ್‌ವೆಲ್ ಹಾಕಿದ್ದಾರೆ, ಅವುಗಳೆಲ್ಲಾ ಒಣಗಿ ಹೋಗಿವೆ. 60 ತಾಂಡಾಗಳಲ್ಲಿ ನೀರು ಇಲ್ಲ, ಸರ್ಕಾರದವರು ಅಲ್ಲಿನ ನೀರಿನ ಸಮಸ್ಯೆಯನ್ನು ಬಗೆಹರಿಸಲು ಏನೂ ಏರ್ಪಾಡು ಮಾಡಿಲ್ಲ. ನೀರು ಇಲ್ಲದೆ ಜನ ತೊಂದರೆ ಪಡುತ್ತಿದ್ದಾರೆ. ಪ್ರತಿಯೊಬ್ಬರೂ 4-5 ಕಿ.ಮಿ. ದೂರ ಹೋಗಿ ನೀರು ತರಬೇಕಾಗಿದೆ. ಸರ್ಕಾರ ಏನೂ ಕ್ರಮ ತೆಗೆದುಕೊಳ್ಳುವುದಿಲ್ಲ. ಜಿಲ್ಲಾಧಿಕಾರಿಗಳನ್ನು ಕೇಳಿದರೆ ದುಡ್ಡು ಇಲ್ಲ ಎಂದು ಹೇಳುತ್ತಾರೆ. ಜಿಲ್ಲಾಪರಿಷತ್‌ನಲ್ಲಿ ದುಡ್ಡು ಇಲ್ಲ ಎಂದು ಹೇಳುತ್ತಾರೆ. ಸರ್ಕಾರದವರು ಏನು ಮಾಡುತ್ತಾರೆ? ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳುವ ವ್ಯವಸ್ಥೆ ಮಾಡಬೇಕು. ನಿರ್ದಿಷ್ಟವಾಗಿ ಎಷ್ಟು ದುಡ್ಡನ್ನು ಕೊಡುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ : ಸಭಾಧ್ಯಕ್ಷರೇ, ಬೇಸಿಗೆ ಕಾಲ ಈಗ ಪ್ರಾರಂಭವಾಗಿದೆ. ಅನೇಕ ಹಳ್ಳಿಗಳಲ್ಲಿ ಅದರಲ್ಲೂ ಕ್ರಿಟಿಕಲ್ ವಿಲೇಜ್‌ಗಳು ಏನು ಇದೆ ಅಲ್ಲಿ ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗಿದೆ. 300-400 ಜನಸಂಖ್ಯೆ ಇರತಕ್ಕ ಹಳ್ಳಿಗಳಲ್ಲಿ ಒಂದು ಬೋರ್‌ವೆಲ್ ಕೆಟ್ಟು ಹೋದರೆ ಆ ಜನಗಳಿಗೆ 2-3 ತಿಂಗಳು ಕುಡಿಯುವ ನೀರು ಸಿಗುವುದಿಲ್ಲ. ಬೋರ್‌ವೆಲ್ ರಿಪೇರಿಗಾಗಿ ಚೀಫ್ ಸೆಕ್ರೆಟರಿಗೆ ಕೇಳಿದರೆ ದುಡ್ಡು ಇಲ್ಲ ಎಂದು ಹೇಳುತ್ತಾರೆ. ಮಂಡಲಪಂಚಾಯತ್ ಸಕ್ರಟರಿಯವರಿಗೆ ಕೇಳಿದರೆ ಅವರೂ ಸಹ ದುಡ್ಡು ಇಲ್ಲ ಎಂದು ಹೇಳುತ್ತಾರೆ. ಬೋರ್‌ವೆಲ್‌ಗಳನ್ನು ರಿಪೇರಿ ಮಾಡಿಸಲು ಸರ್ಕಾರದ ಕೈಯಲ್ಲಿ ಆಗುತ್ತಿಲ್ಲ. ವಿಶೇಷವಾಗಿ ಬೀದರಿನ ಔರಾದ್ ತಾಲ್ಲೂಕಿನ 80 ಹಳ್ಳಿಗಳಲ್ಲಿ ಕುಡಿಯಲು ನೀರು ಇಲ್ಲ. ಒಂಟೆಗಳ ಮೇಲೆ ನೀರು ತಂದು ಜೀವನ ಮಾಡುವಂತಹ ಪರಿಸ್ಥಿತಿ ನಾನು ಅಲ್ಲಿಗೆ ಹೋದಾಗ ನನ್ನ ಗಮನಕ್ಕೆ ಬಂತು. ಈ ಬೇಸಿಗೆ ಕಾಲದಲ್ಲಿ ಇಡೀ ರಾಜ್ಯದಲ್ಲಿ ಅದರಲ್ಲೂ ವಿಶೇಷವಾಗಿ ಔರಾದ್ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಏನು ಇದೆ ಅದನ್ನು ಬಗೆಹರಿಸಲು ಒಂದಿಷ್ಟು ಹಣವನ್ನು ಸರ್ಕಾರ ಬಿಡುಗಡೆ ಮಾಡಬೇಕು. ಬೋರ್‌ವೆಲ್ಲನ್ನು ಹಾಕಿಸತಕ್ಕದ್ದು ಬೋರ್‌ವೆಲ್ಲನ್ನು ರಿಪೇರಿ ಮಾಡಿಸತಕ್ಕದ್ದು, ಮಿನಿ ವಾಟರ್ ಸ್ಕೀಮನ್ನು ಮಾಡಿಸತಕ್ಕದ್ದು, ಇದಕ್ಕೆಲ್ಲಾ ಹಣ ಬೇಕಾಗಿದೆ. ನಾನು ಮಂತ್ರಿಗಳನ್ನು ಒತ್ತಾಯ ಮಾಡುವುದು .

ದಯವಿಟ್ಟು ಇದಕ್ಕೆ ಬೇಕಾಗುವಷ್ಟು ಹಣವನ್ನು ಕೂಡಲೇ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುತ್ತೀರಾ?

11.45 ಎ.ಎಂ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾನು ಅಂಕಿ ಅಂಶಗಳ ಪ್ರಕಾರ ಹೇಳುವುದಾದರೆ ನನ್ನ ತಾಲ್ಲೂಕಿನಲ್ಲಿ 160 ಕೊಳವೆ ಬಾವಿಗಳು ಕೆಟ್ಟಿವೆ. ಇಡೀ ರಾಜ್ಯದಲ್ಲಿ ಸರಾಸರಿ ಲೆಕ್ಕ ತೆಗೆದುಕೊಂಡರೆ ಕನಿಷ್ಟ 2 ಸಾವಿರ ಕೊಳವೆ ಬಾವಿಗಳು ಕೆಟ್ಟಿವೆ. ಒಣಗಿರುವ ಬಾವಿಗಳು ಲೆಕ್ಕವಿಲ್ಲದಷ್ಟು ಇವೆ. ಅವುಗಳನ್ನು ರಿಪೇರಿ ಮಾಡುತ್ತಿಲ್ಲ. ಈಗ ಬೇಸಿಗೆಯಿಂದ ಮೂರು ತಿಂಗಳು ಬಹಳ ವಿಷಮ ಪರಿಸ್ಥಿತಿ ಉಂಟಾಗುತ್ತದೆ. ಆದ್ದರಿಂದ ಆದಷ್ಟು ಬೇಗ ಎಚ್ಚರ ವಹಿಸಿ ಇದರ ಬಗ್ಗೆ ವಿಶೇಷವಾದಂತಹ ಗಮನ ಹರಿಸಲಿಲ್ಲ ಎಂದರೆ ಭೀಕರವಾದಂತಹ ಪರಿಸ್ಥಿತಿ ಉಂಟಾಗುತ್ತದೆ. ಸರ್ಕಾರ ಇದಕ್ಕೆ ಏನು ವ್ಯವಸ್ಥೆ ಮಾಡಿದೆ. ಪ್ರತಿ ತಾಲ್ಲೂಕಿನಲ್ಲಿಯೂ ರಿಪೇರಿ ಮಾಡುವುದಕ್ಕೆ ಯಾರು ಏಜೆನ್ಸಿ ತೆಗೆದುಕೊಂಡಿದ್ದಾರೆ, ಇದರ ಬಗ್ಗೆ ಸರ್ಕಾರ ನೀತಿ ನಿರೂಪಣೆ ಮಾಡಿಲ್ಲ. ಪ್ರತಿಯೊಂದು ತಾಲ್ಲೂಕಿನಲ್ಲಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ಹೇಳಿದ್ದೇವೆ, ಅವರು ರಿಪೇರಿ ಮಾಡುತ್ತಾರೆ ಎಂದು ಸರ್ಕಾರ ಸುಮ್ಮನೆ ಹೇಳುತ್ತಿದೆ. ಇದುವರೆವಿಗೂ ಏನೂ ಆಗಿಲ್ಲ. ಜಿಲ್ಲಾ ಪರಿಷತ್ತಿನ ಇಂಜಿನೀಯರ್‌ಗಳಿಗೆ ಹೇಳಿದ್ದೇವೆಂದು ಹೇಳಿದ್ದಾರೆ. ಆದರೆ ಇಂದು ಜಿಲ್ಲಾ ಪರಿಷತ್ತಿನಲ್ಲಿ ಯಾವ ವ್ಯವಸ್ಥಿತವಾದಂತಹ ಕಾರ್ಯಕ್ರಮಗಳು ಇಲ್ಲದೆ ಸತ್ತಿದೆ. ಜನ ಹಾಹಾಕಾರದಲ್ಲಿ ಇದ್ದಾರೆ. ಆದ್ದರಿಂದ ದಯಮಾಡಿ ಸರ್ಕಾರ ಇದರ ಬಗ್ಗೆ ವಿಶೇಷವಾದಂತಹ ಕ್ರಮವನ್ನು ಕೈಗೊಳ್ಳುವುದಕ್ಕೆ ಆದೇಶವನ್ನು ಹೊರಡಿಸಬೇಕು. ಇದಕ್ಕೆ ಬೇಕಾಗುವ ಹಣವನ್ನು ಬಿಡುಗಡೆ ಮಾಡಬೇಕು. ಒಂದೊಂದು ಕೊಳವೆ ಬಾವಿಗಳಿಗೆ 150 ರಿಂದ 200 ರೂಪಾಯಿಗಳು ಖರ್ಚಾಗುತ್ತಿದೆ. ಆದರೆ ಇವರು 20 ರೂಪಾಯಿಗಳನ್ನು ಕೊಡುತ್ತಾರೆ. ಸರ್ಕಾರ ಪರಿಣಾಮಕಾರಿ ಆಜ್ಞೆಯನ್ನು ಹೊರಡಿಸಬೇಕು. ಇಲ್ಲದಿದ್ದರೆ ಇನ್ನು 2 ತಿಂಗಳುಗಳಲ್ಲಿ ನೀರಿನ ಭೀಕರ ಪರಿಸ್ಥಿತಿಯನ್ನು ಕರ್ನಾಟಕ ಪ್ರತಿ ತಾಲ್ಲೂಕಿನಲ್ಲೂ ನೋಡಬೇಕಾಗುತ್ತದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೇ, ಕೊಳವೆ ಬಾವಿಗಳ ರಿಪೇರಿಯನ್ನು ಮಂಡಲ್ ಪಂಚಾಯತ್‌ನವರು ಮಾಡುತ್ತಿದ್ದಾರೆಂದು ಶ್ರೀ ಫೂರ್ಪಡೆಯವರು ಹೇಳಿದ್ದರು. ಜಿಲ್ಲಾ ಪರಿಷತ್‌ಗೆ ಸರ್ಕ್ಯೂಲರ್ ಇಶ್ಯೂ ಮಾಡಿದ್ದೇವೆಂದು ಹೇಳಿದರು. ಆದರೆ, ಮಂಡಲ್ ಪಂಚಾಯತ್‌ನಲ್ಲಿ ಕೇಳಿದರೆ ಜಿಲ್ಲಾ ಪರಿಷತ್ತುನವರು ಮಾಡುತ್ತಾರೆ ಎಂದು ಹೇಳುತ್ತಾರೆ. ಜಿಲ್ಲಾ ಪರಿಷತ್ತ್‌ನವರು ಮಂಡಲ್ ಪಂಚಾಯತ್‌ನವರು ರಿಪೇರಿ ಮಾಡುತ್ತಾರೆ ಎಂದು ಹೇಳುತ್ತಾರೆ. ಒಂದೊಂದು ತಾಲೂಕಿಗೆ ಒಂದು ಟ್ರಾಕ್ಟರ್, ಮೋಟಾರು ಕೊಡುತ್ತಾರೆ. ಇವರು ಬರುವುದಕ್ಕೆ 15 ದಿವಸ 1 ತಿಂಗಳಾದರೂ ಬರುವುದಿಲ್ಲ. ಇದರಿಂದ ಕುಡಿಯುವ ನೀರಿಗೆ ತ್ರಾಸ್ ಆಗಿದೆ. ಬೆಳಗಾವಿ ಜಿಲ್ಲೆಯಲ್ಲಿ ಆಗಿರುವಷ್ಟು ತೊಂದರೆ ಬೇರೆಲ್ಲೂ ಆಗಿಲ್ಲ. ಬೆಳಗಾವಿ ಜಿಲ್ಲೆಯ ಚಿಕ್ಕಮುದ್ದನೂರು, ಕುಂಟರಟ್ಟೆ, ಎಸ್.ಸಿ/ಎಸ್.ಟಿ. ಜನರಿರುವ ಜಾಗಗಳಲ್ಲಿ ಕುಡಿಯುವುದಕ್ಕೆ ನೀರು ಇಲ್ಲ, ಬರುವ ಒಂದು ಬೋರ್‌ವೆಲ್ ರಿಪೇರಿಯಾಗದೆ, ಅಲ್ಲಿನ ಹೆಣ್ಣುಮಕ್ಕಳು 3-4 ಕಿ.ಮಿ. ದೂರದಿಂದ ನೀರು ತರುತ್ತಾರೆ. ನಾವು ಅಲ್ಲಿಗೆ ಹೋದರೆ ಅವರು ತಮ್ಮ ನೀನು ಎಂ.ಎಲ್.ಎ. ಆದರೆ ಏನು ನಮಗೆ ಗೂನು ಒಗ್ಗೊಗಯಿತೆ ಎಂದು ಹೇಳುತ್ತಾರೆ. ಇದರ ಬಗ್ಗೆ ಡಿ.ಸಿ.ಯನ್ನು ಕೇಳಿದರೆ ರೊಕ್ಕ ಇಲ್ಲವೆಂದು ಹೇಳುತ್ತಾರೆ. ಪಂಪ್‌ಗೆ ಡೀಸಲ್ ಇಲ್ಲ ಎಂದು ಹೇಳುತ್ತಾರೆ. ವಿದ್ಯುತ್ ಹೋದರೆ ಏನು ಮಾಡುತ್ತಾರೆ. ಸಂಬಳ ಬೇಕು ಅಂದರೆ ಪಟ್ಟು ಹಿಡಿದು ಟ್ರೆಜರಿಯಿಂದ ಪಡೆಯುತ್ತಾರೆ. ಸರ್ಕಾರ ಸಂಜೆಯ ಒಳಗೆ ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಆರ್ .ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಇಡೀ ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗಿದೆ. ಔರಾದ್ ತಾಲ್ಲೂಕಿನಲ್ಲೂ ಈ ಸಮಸ್ಯೆ ಬಹಳ ಗಂಭೀರವಾಗಿದೆ. ಆ ಭಾಗದ ಕಾರ್ಯಕರ್ತರನ್ನು ಭೇಟಿಯಾಗಲು ಮೊನ್ನೆ ಶಾಸಕರು ಹೋದಾಗ ಅಲ್ಲಿನ ಜನರು ಘೆರಾವ್ ಮಾಡಿದರು. ಅವರನ್ನು ಜನರು ಬಿಡಲಿಕ್ಕೆ ತಯಾರಿರಲಿಲ್ಲ. ಅಲ್ಲಿನ ಜಿಲ್ಲಾಧಿಕಾರಿಯನ್ನು ಭೇಟಿಯಾದಾಗ ಅವರು ಚೀಫ್ ಸೆಕ್ರೆಟರಿಯ ಹತ್ತಿರ ಮಾತನಾಡಬೇಕು ಎಂದರು. ಚೀಫ್ ಸೆಕ್ರೆಟರಿಯನ್ನು ಕೇಳಿದರೆ, ನಾನು ಏನು ಮಾಡುವುದಕ್ಕೆ ಸಾಧ್ಯ, ಸರ್ಕಾರಕ್ಕೆ ರಿಪೋರ್ಟ್ ಕಳುಹಿಸಿದ್ದೇನೆ, ಹಣ ಬಿಡುಗಡೆ ಆಗಿಲ್ಲವೆಂದು ಹೇಳುತ್ತಾರೆ. ಕುಡಿಯುವ ನೀರಿನ ಪರಿಹಾರಕ್ಕಾಗಿ ಏಕೆ ಹಣ ಬಿಡುಗಡೆಯಾಗಿಲ್ಲ?

ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ತರುತ್ತಿದ್ದೇನೆ ತಕ್ಷಣ ತಾವು ಎಲ್ಲೆಲ್ಲಿ ಕುಡಿಯುವ ನೀರಿನ ಅಭಾವ ಇದೆ, ಅಲ್ಲಲ್ಲಿ ಪೈಯಾರಿಟಿ ಮೇಲೆ ಹಣ ಬಿಡುಗಡೆ ಮಾಡಬೇಕು . ಹಳ್ಳಿ ಇರಬಹುದು, ಪಟ್ಟಣ ಇರಬಹುದು. ಆದರಲ್ಲಿಯೂ ಔರಾದ್ ಸಮಸ್ಯೆ ತಾವು ಪ್ರಾಮುಖ್ಯವಾಗಿ ಬಗೆಹರಿಸಬೇಕು. ತಮ್ಮಲ್ಲಿ ಒತ್ತಾಯ ತರುತ್ತೇನೆ. ಅಷ್ಟೇ ಅಲ್ಲ, ಇಡೀ ಸದನವನ್ನು ವಿಶ್ವಾಸ ತೆಗೆದುಕೊಂಡು ಇವತ್ತು ಸಂಜೆ, ಅಥವಾ ಬೀದರ್‌ನಲ್ಲಿ ಬಂದು ಮಾನ್ಯ ಸಚಿವರು ಇದರ ಮೇಲೆ ಒಂದು ಸ್ಟೇಟ್‌ಮೆಂಟ್ ಮಾಡಬೇಕು. ಈ ವರ್ಷ ಭೀಕರ ಬರಗಾಲ ಬಂದಿದೆ. 4-5 ಜಿಲ್ಲೆಗಳಲ್ಲಿ ಅತಿವೃಷ್ಟಿ ಆಗಿದೆ, ಬಹಳಷ್ಟು ಜಿಲ್ಲೆಯಲ್ಲಿ ಮಳೆಯಾಗಿಲ್ಲ. ಗ್ರೌಂಡ್ ವಾಟರ್ ಕಡಿಮೆಯಾಗಿದ್ದು, ಈ ಸಮಸ್ಯೆ ಜ್ವಲಂತವಾಗಿದೆ. ಹಾಗಾಗಿ ಸರ್ಕಾರ ಇದರ ಬಗ್ಗೆ ವಿವರವಾದ ಸ್ಟೇಟ್‌ಮಂಟ್ ಕೊಡಬೇಕಾಗಿದೆ. ಈ ಸಮಸ್ಯೆ ಎಲ್ಲೆಲ್ಲಿ ಇದೆ. ಈ ಸಮಸ್ಯೆ ಬಗೆಹರಿಸಲಿಕ್ಕೆ ಸರ್ಕಾರದಿಂದ ಎಷ್ಟು ಹಣ ಬಿಡುಗಡೆ ಮಾಡುತ್ತೀರಿ, ಎಷ್ಟು ಮಾಡಿದ್ದೀರಿ? ಯಾವ ಜಿಲ್ಲಾಧಿಕಾರಿಗಳ ಹತ್ತಿರ ಎಷ್ಟು ಹಣ ಇದೆ. ಮೊದಲು ಯುದ್ಧೋಪಾದಿಯಲ್ಲಿ ಈ ಕೆಲಸ ತೆಗೆದುಕೊಳ್ಳಬೇಕಾಗುತ್ತದೆ. ಮತ್ತೊಂದು ಏನು ಸಮಸ್ಯೆಯಾಗಿದೆ ಎಂದರೆ ಬೋರ್‌ವೆಲ್ ಡ್ರಿಲ್ ಮಾಡುವ ಒಂದು ಕಾರ್ಯಕ್ರಮ ಇದೆ. ಸ್ಟೇಟ್ ಸೆಕ್ಟರ್ ಒಂದು ಇದೆ. ಸೆಂಟ್ರಲ್ ಸೆಕ್ಟರ್ ಇದೆ, ಜಿಲ್ಲಾಪರಿಷತ್ ಕಾರ್ಯಕ್ರಮ ಇದೆ. ಅವರದ್ದೇ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದರು. They could get it drilled from anybody, either through private agency or Government agency. ಗೌರ್ನಮೆಂಟ್ ಇದೆ, ಪಬ್ಲಿಕ್ ಹೆಲ್ತ್ ಇಂಜಿನಿಯರಿಂಗ್ ಡಿಪಾರ್ಟ್‌ಮಂಟ್ ಬೊರ್‌ವೆಲ್ ಡ್ರಿಲ್ ಮಾಡಬೇಕು ಸಂತೋಷ ಮಾಡಿ. ಆದರೆ ಪಬ್ಲಿಕ್ ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟ್‌ನಲ್ಲಿ ರಿಗ್ಸ್ ಬಹಳ ಕಡಿಮೆ ಇದೆ, ಸರಿಯಾದ ಸಮಯಕ್ಕೆ ರಿಗ್ಸ್ ಮುಟ್ಟುತ್ತಿಲ್ಲ. ಆದರೆ ಅವರು ಡ್ರಿಲ್ ಮಾಡುತ್ತಿದ್ದೇವೆಂದು ಹೇಳುತ್ತಾರೆ. ಅವರು ಕೊಟ್ಟ ಪೋಗ್ರಾಮ್ ಪ್ರಕಾರ ಡ್ರಿಲ್ ಮಾಡುತ್ತಿಲ್ಲ. ಹಾಗಾಗಿ ಈ ಸಮಸ್ಯೆ ನಿರ್ಮಾಣವಾಗಿದೆ. ತಾವು ವಿವರವಾಗಿ ಸ್ಟೇಟ್‌ಮೆಂಟ್ ಕೊಡಬೇಕು ಮತ್ತು ಪ್ರತಿಯೊಂದು ಜಿಲ್ಲೆಯಲ್ಲಿ ಎಲ್ಲೆಲ್ಲಿ ಕುಡಿಯುವ ನೀರಿನ ಅಭಾವ ಇದೆ ಅದಕ್ಕೆ ತಾವು ಹಣ ಬಿಡುಗಡೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ಉಮಾಪತಿ : ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಸದಸ್ಯರು ಹೇಳಿದಂತೆ ಕುಡಿಯುವ ನೀರಿನ ಸಮಸ್ಯೆಯನ್ನು ಬಹಳ ತೀವ್ರವಾಗಿ ಎದುರಿಸುತ್ತಿದ್ದೇವೆ. ನಮ್ಮ ಹೊಳಲ್‌ಕೆರೆ ತಾಲ್ಲೂಕು ಮಟ್ಟಿಗೆ ಹೇಳುವುದಾದರೆ, ಈಗ ಬೇಸಿಗೆ ಕಾಲ ಪ್ರಾರಂಭವಾಗಿದೆ. ಒಂದಲ್ಲಾ ಒಂದು ರೀತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ, ಬೋರ್‌ವೆಲ್‌ಗಳು ಕೆಟ್ಟುಹೋಗುತ್ತಿದೆ. ಅವುಗಳನ್ನು ರಿಪೇರಿ ಮಾಡುವುದು ಕಷ್ಟದ ಕೆಲಸ. ಇಡೀ ತಾಲ್ಲೂಕಿಗೆ ಒಂದು ವಾಹನ ಮಾತ್ರ ಕೊಟ್ಟಿರುತ್ತಾರೆ. ವಾಹನ ಒಂದು ಕಡೆ ಒಂದು ದಿವಸ ಹೋದರೆ ಇನ್ನೊಂದು ಕಡೆ ಇನ್ನೊಂದು ದಿವಸ ಹೋಗಲಿಕ್ಕೆ ಆಗುವುದಿಲ್ಲ. ಇದನ್ನು ರಿಪೇರಿ ಮಾಡಿ ಬರುವುದರಲ್ಲಿ ಇನ್ನೊಂದು ಕಡೆ ಕೆಟ್ಟು ಹೋಗಿರುತ್ತದೆ. ಆದ್ದರಿಂದ ವೆಹಿಕಲ್‌ನ್ನು ಸರಿಯಾದ ರೀತಿಯಲ್ಲಿ ಕೊಡತಕ್ಕಂಥ ವ್ಯವಸ್ಥೆಯಾಗಬೇಕು ಮತ್ತು ನನ್ನ ತಾಲ್ಲೂಕಿಗೆ ಕೆಲವೊಂದು ಹಳ್ಳಿಗಳ ಮಟ್ಟಿಗೆ

ಹೇಳುವುದಾದರೆ ಉದಾಹರಣೆಗೆ ಬಳ್ಳಾರಿಹಟ್ಟಿ, ಬ್ರಹ್ಮಪುರ, ನಂದನ ಹೊಸೂರು ಗೊಲ್ಲರ ಹಟ್ಟಿ. ಈ ಹಳ್ಳಿಗಳಲ್ಲಿ ಕಳೆದ ವರ್ಷದಿಂದಲೂ ಕೂಡ ಪ್ರಯತ್ನ ಮಾಡುತ್ತಿದ್ದೇವೆ. ಅಲ್ಲಿ 200 ರಿಂದ 300 ಅಡಿ ಕೊರೆದರೂ ಕೂಡ ನೀರು ಬೀಳುತ್ತಿಲ್ಲ. ಮತ್ತೆ ಅಜುಬಾಜಿನಲ್ಲಿ ಒಂದು ಕಿಲೋಮೀಟರ್ ದೂರದಲ್ಲಿ ಕೊರೆದರೂ ಕೂಡ ನೀರು ಬೀಳುತ್ತಿಲ್ಲ. ಜಿಲ್ಲಾ ಪರಿಷತ್‌ನವರೂ ಕೂಡ ಅದನ್ನು ಪ್ರಾಬ್ಲಮ್ಯಾಟಿಕ್ ವಿಲೇಜಸ್ ಎಂದು ಹೇಳಿ ಲೆಕ್ಕ ತೆಗೆದುಕೊಂಡು ಎಲ್ಲಾ ಪ್ರಯತ್ನ ಮಾಡಿದರೂ ಕೂಡ ಆ ಹಳ್ಳಿಗಳಿಗೆ ನೀರನ್ನು ಕೊಡಿಸಲಿಕ್ಕೆ ಆಗುತ್ತಿಲ್ಲ. ಈಗ ಬಳ್ಳಾರಿ ಹಟ್ಟಿಯಲ್ಲಿ ಸುಮಾರು 50 ರಿಂದ 100 ಮನೆಗಳು ಇದೆ. ಎಲ್ಲೂ ಹರಿಜನರೇ ಇರತಕ್ಕಂಥದ್ದು. ಈ ಬಳ್ಳಾರಿ ಹಟ್ಟಿಯವರು 2-3 ಕಿಲೋಮೀಟರ್ ಹೋಗಿ, ಪಕ್ಕದ ಬಿದರೆಕೆರೆ ಎಂಬ ಊರಿಗೆ ಹೋಗಿ ನೀರು ತರಬೇಕಾಗಿದೆ. ಅಲ್ಲಿ ಕುಡಿಯುವ ನೀರಿನ ಸಪ್ಲೈ ಮಾಡುವುದಕ್ಕೆ ಆಗಿಲ್ಲ. ಆದ್ದರಿಂದ ತಾವು ಕೊನೇಯ ಪಕ್ಷ ಬೊರ್‌ವೆಲ್ ರಿಪೇರಿ ಮಾಡಿಸಿ, ಪ್ರತಿ ತಾಲ್ಲೂಕಿಗೂ ಎರಡೆರಡು ವೆಹಿಕಲ್ ಕೊಡತಕ್ಕಂಥ ವ್ಯವಸ್ಥೆ ಮಾಡಬೇಕು ಎಂದು ತಮ್ಮ ಮುಖಾಂತರ ವಿನಂತಿಸಿಕೊಳ್ಳುತ್ತೇನೆ. ಈ ಹಳ್ಳಿಗಳಿಗೆ ತತ್‌ಕ್ಷಣ ಕುಡಿಯುವ ನೀರಿನ ವ್ಯವಸ್ಥೆಯನ್ನು ಮುಖ್ಯಮಂತ್ರಿಗಳಿಗೆ ಹೇಳಿ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ಶ್ರೀ ಆರ್.ಎನ್. ನಾಯಕ್ : ಸನ್ಮಾನ್ಯ ಅಧ್ಯಕ್ಷರೇ, ಶಾಸಕರು ಯಾವದೇ ಒಂದು ಶಾಸನ ಸಭಾ ಕಾರ್ಯಕ್ಷೇತ್ರದಲ್ಲಿ ಸರ್ಕಾರದಿಂದ ಅಥವಾ ಸರ್ಕಾರದ ಅಂಗ ಸಂಸ್ಥೆಯಿಂದ ಏನಾದರೂ ಒಂದು ಕಾರ್ಯಕ್ರಮ ಆಗುವಾಗ ಅಲ್ಲಿನ ಶಾಸಕರನ್ನು ಅಧ್ಯಕ್ಷನಾಗಿ ಅಥವಾ ಇನ್ನಾವುದೇ ರೂಪದಲ್ಲಿ...

(ಗೊಂದಲ)

ಅಧ್ಯಕ್ಷರು : ಬಹಳ ಮುಖ್ಯವಾಗಿ ಕುಡಿಯುವ ನೀರಿನ ಬಗ್ಗೆ ಚರ್ಚೆಯಾಗುತ್ತಿದೆ. ತಮಗೆ ಆಮೇಲೆ ಅವಕಾಶ ಕೊಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಹೆಚ್ಚು ಪ್ರಾಮುಖ್ಯವಾದ ವಿಷಯದ ಬಗ್ಗೆ ಚರ್ಚೆಯಾಗುತ್ತಾ ಇದೆ. ಇದು ಯಾವುದೇ ತಾಲ್ಲೂಕಿಗಾಗಲಿ, ಜಿಲ್ಲೆಗಾಗಲಿ, ಸಂಬಂಧಪಟ್ಟ ಪ್ರಶ್ನೆಯಲ್ಲ. ಇದು ರಾಜ್ಯಕ್ಕೆ ಸಂಬಂಧಪಟ್ಟ ಪ್ರಶ್ನೆಯಾಗಿದೆ. ಶ್ರೀ ನಜೀರಸಾಬರವರು ಈ ಇಲಾಖೆಯನ್ನು ವಹಿಸಿಕೊಂಡ ಸಂದರ್ಭದಲ್ಲಿ ವಿಶೇಷವಾಗಿ ಎಲ್ಲಾ ಗ್ರಾಮೀಣ ಪ್ರದೇಶಗಳಲ್ಲಿ, ಹರಿಜನ ವಾಡಿಗಳಲ್ಲಿ, ಹಾಗೂ ತಾಂಡಾಗಳಲ್ಲಿ ಸಾಕಷ್ಟು ಬೋರ್‌ವೆಲ್ ತೆಗೆಸಿದ್ದಾರೆ. ಆದರೆ ಜಿಲ್ಲಾಪರಿಷತ್ತಿನ ವ್ಯವಸ್ಥೆಯಾದ ಮೇಲೆ ರಿಪೇರಿ ಮಾಡಿಸುವಂಥ ಅಧಿಕಾರವನ್ನು ಸರ್ಕಾರ ಮಂಡಲಪಂಚಾಯತಿಗೆ ವಹಿಸಿಕೊಟ್ಟಿದೆ. ಮಾನ್ಯ ಅಧ್ಯಕ್ಷರೇ, ತಮ್ಮ ತಾಲ್ಲೂಕಿನಲ್ಲೂ ಇದೇ ಪರಿಸ್ಥಿತಿ ಇರಬಹುದು. ಮಂಡಲ ಪಂಚಾಯತಿಗಳಲ್ಲಿ ಯಾವುದೇ ಮೆಕ್ಯಾನಿಕ್ ಇಲ್ಲ. ಮೇಟೆರಿಯಲ್ಸ್ ಇಲ್ಲ. ರಿಪೇರಿ ಮಾಡಿಸಲಿಕ್ಕೆ ವಾಹನಗಳು ಇಲ್ಲ. ದಯಮಾಡಿ, ರಿಪೇರಿ ಮಾಡಿಸುವಂತಹ ಕೆಲಸವನ್ನು ಜಿಲ್ಲಾಪರಿಷತ್‌ಗೆ ವಹಿಸಬೇಕು. ಈ ರೀತಿ ಮಾಡಿದರೆ ಆ ಸಮಸ್ಯೆ ಪರಿಹಾರವಾಗುತ್ತದೆ. ಈಗ ಬೇಸಿಗೆ ಕಾಲ ಸಮೀಪವಾಗುತ್ತಿದೆ. ಮಾರ್ಚ್ ಆದ ಮೇಲೆ ನಾವು ಹಳ್ಳಿಗೆ ಹೋಗಬೇಕು. ಅನೇಕ ಕಡೆಗಳಲ್ಲಿ ಬೊರ್‌ವೆಲ್ ಸಕ್ಸೆಸ್‌ಫುಲ್ ಆಗಿದೆ. ಬೋರ್‌ವೆಲ್ಲನ್ನು ರಿಪೇರಿ ಮಾಡಿಸಲು ಸರ್ಕಾರ ಗಮನ ಕೊಡುತ್ತಿಲ್ಲ. ಅಧಿಕಾರ ವಿಕೇಂದ್ರಿಕರಣವಾದ ಮೇಲೆ ಜಿಲ್ಲಾಪರಿಷತ್ ಬಂತು. ಗ್ರಾಮೀಣ ಪ್ರದೇಶಗಳಲ್ಲಿ ಬೋರ್‌ವೆಲ್‌ಗಳು ಇವೆ. ಅವುಗಳನ್ನು ರಿಪೇರಿ ಮಾಡಿಸಬೇಕು. ಹೊಸದಾಗಿ 50-60 ಸಾವಿರ ರೂ. ಖರ್ಚು ಮಾಡಿ ಬೋರ್‌ವೆಲ್‌ಗಳನ್ನು ಹಾಕಿಸುವುದಕ್ಕೆ ಬದಲಾಗಿ ಇರತಕ್ಕ ಬೋರ್‌ವೆಲ್‌ಗಳನ್ನು ರಿಪೇರಿ ಮಾಡಿಸಿ ಪಂಪ್ ಹಾಕಿಸಿ ಮಿನಿ ವಾಟರ್ ಸಪ್ಲೈ ಮಾಡುವ ಕ್ರಮವನ್ನು ಕೈಗೊಳ್ಳಬೇಕು. ಆ ರೀತಿ ಮಾಡಿದರೆ ಕೋಟಿಗಟ್ಟಲೆ ಹಣ ದುರ್ವ್ಯಯವಾಗುವುದು

ತಪ್ಪತ್ತದೆ. ಇಡೀ ರಾಜ್ಯದಲ್ಲಿ ಎಷ್ಟು ಬೋರ್‌ವೆಲ್‌ಗಳಿವೆ, ಎಷ್ಟು ರಿಪೇರಿಗೆ ಬಂದಿವೆ, ಎಂಬುದರ ಬಗ್ಗೆ ಎಲ್ಲಾ ವಿವರಗಳನ್ನು ಪಡೆದುಕೊಳ್ಳಬೇಕು. ಮಂಡಲಪಂಚಾಯಿತಿಗಳು ಈ ಕೆಲಸವನ್ನು ಮಾಡಲು ಆಗುವುದಿಲ್ಲ. ಜಿಲ್ಲಾಪರಿಷತ್‌ನವರು ಈ ಜವಾಬ್ದಾರಿಯನ್ನು ವಹಿಸಿಕೊಂಡು ಕ್ರಮ ಕೈಗೊಂಡರೆ ಈ ಸಮಸ್ಯೆ ಪರಿಹಾರವಾಗುತ್ತದೆ.

ಶ್ರೀ ಬಿ.ಹೆಚ್.ಬನ್ನಿಕೋಡ್ : ನಮ್ಮ ತಾಲ್ಲೂಕಿನಲ್ಲೂ ಈ ಸಮಸ್ಯೆ ಬಹಳ ಭೀಕರವಾಗಿದೆ. ಪಂಪು ಸೆಟ್ಟುಗಳು ಕೆಟ್ಟು ಮೂರು ತಿಂಗಳಾದರೂ ರಿಪೇರಿ ಮಾಡಿಲ್ಲ. ಅಲ್ಲಿ ಕುಡಿಯುವ ನೀರು ಇಲ್ಲ. ಸರ್ಕಾರ ಏನಾದರೂ ವ್ಯವಸ್ಥೆ ಮಾಡದೇ ಹೋದರೆ ಬಹಳ ತೊಂದರೆಯಾಗುತ್ತದೆ. ಬೇಸಿಗೆ ಕಾಲ ಬರುತ್ತಿರುವುದರಿಂದ ಕೂಡಲೇ ಕ್ರಮ ಕೈಗೊಳ್ಳಬೇಕಾಗಿದೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಬಹಳ ಗಂಭೀರವಾದ ಸಮಸ್ಯೆಯನ್ನು ಮಾನ್ಯ ಸದಸ್ಯರುಗಳು ಎತ್ತಿದ್ದಾರೆ. ಇಡೀ ರಾಜ್ಯದ ನಾನಾ ಭಾಗಗಳಲ್ಲಿ ಕುಡಿಯುವ ನೀರಿನ ತೊಂದರೆ ಇದೆ. ಇದು ಒಂದು ವ್ಯಾಪಕ ಸಮಸ್ಯೆ. ರಾಜ್ಯದಲ್ಲಿ ಇರುವ ಈ ಸಮಸ್ಯೆಯ ವಿವಿಧ ಭಾಗಗಳನ್ನು ಪರಿಶೀಲನೆ ಮಾಡಿ ನಾಳೆ ದಿವಸ ಸಂಬಂಧಪಟ್ಟ ಮಂತ್ರಿಗಳಿಗೆ ವಿವರವಾದ ಹೇಳಿಕೆಯನ್ನು ನೀಡಬೇಕೆಂದು ಮಾನ್ಯ ವಿರೋಧಪಕ್ಷದ ನಾಯಕರು ಸೂಚನೆ ಮಾಡಿರುವಂತೆ ತಿಳಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಗ್ರಾಮಾಭಿವೃದ್ಧಿ ಮತ್ತು ಕಂದಾಯ ಇಲಾಖೆ ಇಬ್ಬರಿಗೂ ಇದು ಬರುತ್ತದೆ. ಇದನ್ನು ಗಮನಿಸಬೇಕು.

ಶ್ರೀ ಬಿ.ಹೆಚ್.ಬನ್ನಿಕೋಡ್ : ಸ್ವಲ್ಪ ಚರ್ಚೆ ಮಾಡಿ ಮೀಟಿಂಗ್‌ಗೆ ಕರೆದು ಹೇಳಿಕೆ ಕೊಟ್ಟರೆ ಒಳ್ಳೆಯದು. ಅದರಿಂದ ಸಮಸ್ಯೆ ಬಗೆಹರಿಯುತ್ತದೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಈಗಾಗಲೇ ಈ ವಿಷಯ ಗ್ರಾಮೀಣ ಅಭಿವೃದ್ಧಿ ಸಚಿವರ ಗಮನಕ್ಕೆ ಬಂದು ಅವರು ಜಿಲ್ಲಾಪರಿಷತ್ ಮುಖ್ಯಕಾರ್ಯದರ್ಶಿಗಳ ಸಭೆಯನ್ನು ಕರೆದಿದ್ದಾರೆ. ಎಲ್ಲಾ ವಿವರಗಳನ್ನು ತೆಗೆದುಕೊಂಡು ಬರಬೇಕೆಂದು ಹೇಳಿದ್ದಾರೆ. ಆದ್ದರಿಂದ ಅವರ ಹತ್ತಿರ ಎಲ್ಲಾ ಅಂಕಿಅಂಶಗಳು ಇವೆ ಅದನ್ನು ತೆಗೆದುಕೊಂಡು ತಮ್ಮ ಮುಂದೆ ಇಡುತ್ತಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ನಾಳೆ ಹೇಳುತ್ತಾರೆಯೇ?

ಅಧ್ಯಕ್ಷರು : ನಾಳೆ ಹೇಳುತ್ತಾರೆ.

ಶ್ರೀ ಕೆ.ಬಿ. ಕೋಳಿವಾಡ : ಈಗಾಗಲೇ ಈ ಬೋರ್‌ವೆಲ್‌ಗಳ ಮೇಂಟೆನೆನ್ಸ್‌ನ್ನು ಮಂಡಲಪಂಚಾಯಿತಿಯವರಿಂದ ಕಿತ್ತುಕೊಂಡು ಜಿಲ್ಲಾಪರಿಷತ್‌ನವರಿಗೆ ಕೊಟ್ಟಿದ್ದಾರೆ. ಅವರು ಇದನ್ನು ಮಾಡುತ್ತಿದ್ದಾರೆ.

ಶ್ರೀ ಕೆ.ಎಸ್.ಈಶ್ವರಪ್ಪ : ಸರಕಾರಿ ಅರೇ ಕಾಲಿಕ ಉಪನ್ಯಾಸಕರೂ ಅಮರಣಾಂತ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರಿಗೆ ತಿಂಗಳಿಗೆ ಆರುನೂರು ರೂಪಾಯಿ ಮತ್ರ ಕೊಡುತ್ತಿದ್ದಾರೆ.

ಅಧ್ಯಕ್ಷರು : ಈಗತಾನೆ ನೀವು ನನ್ನ ಗಮನಕ್ಕೆ ತಂದಿದ್ದೀರಿ, ಈಗಲೇ ವಿಷಯ ಪ್ರಸ್ತಾಪಿಸಬೇಕೆಂದರೆ ಕಷ್ಟವಾಗುತ್ತದೆ. ಒಂದು ಗಂಟೆ ಮುಂಚೆ ಬಂದು ಹೇಳಿದ್ದರೆ, ನಿಮಗೆ ಅವಕಾಶ ಕೊಡತ್ತಿದ್ದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಅಮರಣಾಂತ ಉಪವಾಸ ಮಾಡುತ್ತಿದ್ದಾರೆ. ನಾಳೆ ತೆಗೆದುಕೊಳ್ಳಲು ಅವಕಾಶ ಕೊಡಿ.

2. <u>ಸರ್ಕಾರಿ ಸಮಾರಂಭಗಳಿಗೆ ಆಯಾ ಕ್ಷೇತ್ರಗಳ ಶಾಸಕರುಗಳಿಗೆ ಆಮಂತ್ರಣ.</u>

* ಶ್ರೀ ಆರ್.ಎನ್.ನಾಯಕ್ : ಕರ್ನಾಟಕ ರಾಜ್ಯದಲ್ಲಿ ಯಾವುದೇ ಒಂದು ಶಾಸನಾಸಭೆ ಕ್ಷೇತ್ರದಲ್ಲಿ ಸರ್ಕಾರ ಅಥವಾ ಸರ್ಕಾರದ ಅಂಗ ಸಂಸ್ಥೆಗಳ ವತಿಯಿಂದ ಯಾವುದೇ ಕಾರ್ಯಕ್ರಮ ನಡೆದರೆ ಆಯಾ ಶಾಸನಸಬೆ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಶಾಸಕರನ್ನು ಆ ಸಮಾರಂಭಕ್ಕೆ ಅಧ್ಯಕ್ಷರನ್ನಾಗಿ ಅಥವಾ ಬೇರೆ ರೂಪದಲ್ಲಿ ಅವರಿಗೆ ಅವಕಾಶ ಮಾಡಬೇಕೆಂಬ ರೂಲ್ಸ್‌ಇದೆ. ಸರ್ಕಾರದ ಖರ್ಚಿನಲ್ಲಿ ಈ ಸಮಾರಂಭಗಳು ನಡೆಯುತ್ತಿರುವುದರಿಂದ ಈ ರೀತಿ ಮಾಡಬೇಕೆಂದು ನಿಯಮ ಇದೆ. ನಾನು 1983 ರಲ್ಲಿ ಈ ಪ್ರಶ್ನೆ ಕೇಳಿದಾಗ ಆಗಿನ ಮುಖ್ಯ ಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆ ಈ ರೀತಿ ಉತ್ತರ ಕೊಟ್ಟಿದ್ದರು.
ಹಾಗೆಯೇ ನಮ್ಮ ಕ್ಷೇತ್ರಕ್ಕೆ ಬಂದಾಗಲೂ ಸಹ ನಾನೇ ಹೋಗಬಾರದು ಎಂದು ದೂರ ನಿಂತರೂ ಸಹ ನನ್ನನ್ನು ಕರೆದು ಮುಂದೆ ಕೂರಿಸಿಕೊಂಡು ಫಂಕ್ಷನ್ ಮಾಡಿದರು. ಆಗ ನಾನು ವಿರೋಧ ಪಕ್ಷದಲ್ಲಿದ್ದೆ. ಆದರೆ ಈಗ ಏನಾಗಿದೆಯೆಂದರೆ ಹೊನ್ನಾವರ ತಾಲ್ಲೂಕಿನಲ್ಲಿ ಲಲಿತಾಕಲಾ ಅಕಾಡೆಮಿಯವರು ಒಂದು ಫಂಕ್ಷನ್ ಮಾಡುತ್ತಿದ್ದಾರೆ. ಅದು ಬರುವ 7 ನೇ ತಾರಿಖು ರವಿವಾರದ ದಿವಸ ಇದೆ. ನಮ್ಮ ಹೊನ್ನಾವಾರ ತಾಲ್ಲೂಕಿನ 2-3 ರಷ್ಟು ಭಾಗವನ್ನು ನಾನೂ ಹಾಗೂ 1 ರಷ್ಟು ಭಾಗವನ್ನು ಕೆ.ಹೆಚ್. ಗೌಡರು, ಅಲ್ಲಿ ಪ್ರತಿನಿಧಿಸುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ನಮಗೆ ಒಂದು ಆಹ್ವಾನಪತ್ರಿಕೆ ಬಂದಿಲ್ಲ. ಇದರ ಜೊತೆಗೆ ನಾವು ಅಲ್ಲಿ ಅಧ್ಯಕ್ಷರೂ ಆಗಿಲ್ಲ,ಮುಖ್ಯ ಅತಿಥಿಗಳು ಆಗಿಲ್ಲ. ಈಗ ನಮ್ಮ ಸಮಸ್ಯೆಯೇನೆಂದರೆ, ವಯಸ್ಕರ ಶಿಕ್ಷಣ ಮಂತ್ರಿಗಳಾದ ನಮ್ಮ ಮಿತ್ರ ಮಾನ್ಯ ರಾಣೆಯವರು ಆ ದಿವಸ ಅಲ್ಲಿಗೆ ಬರುತ್ತಿದ್ದಾರೆ. ಅವರು ಬಂದಮೇಲೆ ನಮಗೆ ಆ ಸಭೆಗೆ ಹೋಗದೆ ಇರುವುದಕ್ಕೆ ಆಗುವುದಿಲ್ಲ. ಆ ಸಭೆಗೆ ಹೋದರೂ ನಾವು ಅಲ್ಲಿ ಎಲ್ಲಿ ಕುಳಿತುಕೊಳ್ಳಬೇಕು. ನಾವು ಪ್ರೇಕ್ಷಕರಾಗಬೇಕೇ ಅಥವಾ ಡಯಸ್ ಮೇಲೆ ಹೋಗಬೇಕೆ ಎನ್ನುವ ಸಮಸ್ಯೆ ಎದುರಾಗಿದೆ. ಇದು ಸ್ವಲ್ಪ ನಮ್ಮ ಕಾನೂನು ಮತ್ತು ಆತ್ಮಗೌರವದ ಪ್ರಶ್ನೆ ಆಗಿರುತ್ತದೆ . ಈ ರೀತಿ ಸಮಸ್ಯೆಯಾಗಿದೆ ಎಂದು ಅಲ್ಲಿ ಬಹಳ ಜನ ಹೇಳಿದರು. ವಿರೋಧ ಪಕ್ಷದಲ್ಲೇ ಇರಲಿ ಅಥವಾ ಆಳುವ ಪಕ್ಷದಲ್ಲೇ ಇರಲಿ ಅವರವರನ್ನು ಕರೆದು ಅಲ್ಲಿ ಗೌರವ ಕೊಟ್ಟು ಸಮಾರಂಭ ಮಾಡಬೇಕೆಂಬ ತೀರ್ಮಾನ ಮಾಡುವುದು ಬೇಕಿಲ್ಲ. ಬಹುಶ : ಇದು ಜನತಾ ದಳದ ಸರ್ಕಾರ ಇದ್ದಾಗಲೇ ಮಾಡಿದ್ದುದೋ ಅಥವಾ ಅದಕ್ಕೂ ಹಿಂದೆ ಮಾಡಿರಬಹುದೇನೋ ಗೊತ್ತಿಲ್ಲ. ಹಾಗಿದ್ದಾಗ ಕಾನೂನು ರೀತ್ಯ ನಡೆದುಕೊಳ್ಳುವುದಕ್ಕೆ ಏನು ತೊಂದರೆ ಇದೆ. ಈಗ ಇಲ್ಲಿ ನಮ್ಮ ಕಾನೂನು ಮಂತ್ರಿಗಳು ಇದ್ದಾರೆ ಅವರು ನನಗೆ ಎಲ್ಲಿ ಕುಳಿತುಕೊಳ್ಳಬೇಕು ಎಂದು ಹೇಳಬೇಕು. ಡಯಸ್ ಮೇಲೆ ಹೋಗಬೇಕೇ ಅಥವಾ ಕೆಳಗಡೆ ಕುರ್ಚಿ ಮೇಲೆ ಕುಳಿತು ಪ್ರೇಕ್ಷಕರಾಗಬೇಕೆ, ಅಥವಾ ಆಜ್ಞೆಗೆ ನಿಲ್ಲಬೇಕೇ ಅಥವಾ ಹೋಗಲೇಬಾರದೇ ಎನ್ನುವುದನ್ನು ತಿಳಿಸಿಬಿಟ್ಟರೆ ನನಗೆ ಸಂತೋಷವಾಗುತ್ತದೆ.